ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp.66-71
©*IIMRD*, Mysuru
www.iimrd.com

# ವಿಜಯನಗರ ಕಾಲದ ಆಂಧ್ರ ನಾಯಕರ ಸಮಾಜ ಮತ್ತು ಸಂಸ್ಕೃತಿ

**ಕಿರಣ್. ಜಿ .ಎನ್[1] ಮತ್ತು ವೈ.ಹೆಚ್ ನಾಯಕವಾಡಿ[2]**
[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
[2]ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

**ಸಾರಾಂಶ: (Abstract):**

*ನಾಯಕ ಮನೆತನಗಳು ಪರಂಪರೆಯಿಂದ ಅನುಷ್ಠಾನದಲ್ಲಿದ್ದ ವರ್ಣ ಅಥವಾ ಜಾತಿ ವ್ಯವಸ್ಥೆಯ ಆಧಾರದ ಮೇಲೆ ನಿಂತಿದ್ದವು. ಧರ್ಮಶಾಸ್ತ್ರಗಳ ಪ್ರಕಾರ ವರ್ಣಗಳು ನಾಲ್ಕು ಅವುಗಳ ಪೈಕಿ ಮೊದಲನೇ ಸ್ಥಾನವು ಬ್ರಾಹ್ಮಣ ಅಥವಾ ಪುರೋಹಿತ ವರ್ಗಕ್ಕೆ ಸೇರಿದರೆ ಎರಡನೇ ಸ್ಥಾನವನ್ನು ಕ್ಷತ್ರಿಯರೆಂದು ಕರೆಯುವ ಯೋಧರು ಮೂರನೇ ಸ್ಥಾನವನ್ನು ವೈಶ್ಯರು ಎಂದು ಕರೆಯುವ ವ್ಯಾಪಾರಿಗಳು ನಾಲ್ಕನೇ ಸ್ಥಾನವನ್ನು ಶೂದ್ರರೆಂದು ಪರಿಗಣಿಸಲಾಗಿತ್ತು ಶೂದ್ರ ವರ್ಗದಲ್ಲಿ ಕಾರ್ಮಿಕರು, ಕೃಷಿಕರು, ಕುಶಲಕರ್ಮಿಗಳು ಇದ್ದರು ಪ್ರತಿಯೊಂದು ಜಾತಿಗೆ ತಮ್ಮದೇ ಆದ ಆಚಾರ ನೀತಿ ನಿಯಮಗಳಿದ್ದವು ವಿಜಯನಗರ ಸಾಮ್ರಾಜ್ಯದ ಅರಸರ ಪೂರ್ವ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಪ್ರಸ್ತುತ ಲೇಖನದಲ್ಲಿ ವಿಜಯನಗರ ಕಾಲದ ಆಂಧ್ರ ನಾಯಕರ ಸಮಾಜ ಮತ್ತು ಸಂಸ್ಕೃತಿಯನ್ನು ಕುರಿತು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ವಿಜಯನಗರ ಸಾಮ್ರಾಜ್ಯ, ಆಂಧ್ರ ನಾಯಕರು, ಸಮಾಜ ಮತ್ತು ಸಂಸ್ಕೃತಿ.

**ಪೀಠಿಕೆ:**

ನಾಯಕ ಮನೆತನಗಳು ಪರಂಪರೆಯಿಂದ ಅನುಷ್ಠಾನದಲ್ಲಿದ್ದ ವರ್ಣ ಅಥವಾ ಜಾತಿ ವ್ಯವಸ್ಥೆಯ ಆಧಾರದ ಮೇಲೆ ನಿಂತಿದ್ದವು. ಅರಸರು ಸಮಾಜದಲ್ಲಿ ತಮ್ಮದೇ ಆದ ಸಾಮಾಜಿಕ ಹಿಡಿತ ಸಾಧಿಸುವುದು ಅನಿವಾರ್ಯವಾಗಿತ್ತು. ಈ ರೀತಿಯ ಹಿಡಿತ ಸಾಧಿಸಲು ಬ್ರಾಹ್ಮಣರಿಗೆ ದಾನ ದತ್ತಿಗಳು ನೀಡುವುದು ಮತ್ತು ಸಮಾಜದಲ್ಲಿ ಬ್ರಾಹ್ಮಣರಿಗೆ ಉನ್ನತ ಸ್ಥಾನಮಾನಗಳನ್ನು ನೀಡಿ ಗೌರವಿಸುತ್ತಿದ್ದರು. ಇಂತಹ ಪರಂಪರೆಯನ್ನು ಆಂಧ್ರಪ್ರದೇಶದ ನಾಯಕ ಮನೆತನಗಳು ಸಹ ಮುಂದುವರಿಸಿಕೊಂಡು ಬಂದವು.

ಕೊನಾಲ್ಡ್ ಇಂಡೆನ್ ರವರ ಪ್ರಕಾರ ಮದ್ಯಕಾಲಿನ ಭಾರತದಲ್ಲಿ ರಾಜರು ಸೈನಿಕ ತತ್ವಗಳ ರಕ್ಷಕರಾಗಿ ಧರ್ಮ ಪ್ರಚಾರದ ಸಾಧಕರಾಗಿ ಕಾರ್ಯನಿರ್ವಹಿಸುತ್ತಿದ್ದರು ರಾಜತ್ವವೇ ದೈವವಾಗಿತ್ತು ಅದೇ ರೀತಿ ನಾಯಕ ಮನೆತನಗಳ ಪ್ರಭುತ್ವವು ದೈವತ್ವದ ರಾಜ್ಯಗಳಾಗಿತ್ತು ಸಮಾಜಗಳನ್ನು ನಾಲ್ಕು ವರ್ಣಗಳಲ್ಲಿ

*Please cite this article as:* ಕಿರಣ್, ಜಿ.ಎನ್ ಮತ್ತು ವೈ.ಹೆಚ್ ನಾಯಕವಾಡಿ. (2024). ವಿಜಯನಗರ ಕಾಲದ ಆಂಧ್ರ ನಾಯಕರ ಸಮಾಜ ಮತ್ತು ಸಂಸ್ಕೃತಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 66–71

ವಿಭಜಿಸಿರುವುದನ್ನು ನಾವು ಕಾಣಬಹುದು ಈ ವಿಭಜನೆ ಆಧಾರದ ಮೇಲೆ ಭಾರತೀಯ ಸಮಾಜ ವಿಭಜನೆಗೊಂಡಿದೆ ಇದಕ್ಕೆ ಮಧ್ಯಕಾಲೀನ ಸಮಾಜವು ಹೊರತಾಗಿಲ್ಲ.

**ಸಾಮಾಜಿಕ ಸಂಸ್ಥೆಗಳು**

ವಿಜಯನಗರ ಕಾಲದ ಸಮಾಜದಲ್ಲಿ ಬ್ರಾಹ್ಮಣರು ಆಡಳಿತ ವರ್ಗದ ಮೇಲೆ ತಮ್ಮ ಅಗಾಧವಾದ ಪ್ರಭಾವದಿಂದಾಗಿ ಸಮಾಜದಲ್ಲಿ ವಿಶೇಷ ಸ್ಥಾನಮಾನವನ್ನು ಹೊಂದಿದರು ಹಾಗೂ ಸಾಮ್ರಾಜ್ಯದ ಎಲ್ಲ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು ಇವರು ಧರ್ಮಗ್ರಂಥಗಳು ಧಾರ್ಮಿಕ ಕೃತಿಗಳ ಅಧ್ಯಯನ ಮತ್ತು ಚರ್ಚೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಈ ನಾಯಂಕರ ಅವಧಿಯಲ್ಲಿ ಬ್ರಾಹ್ಮಣರ ಪ್ರತಿಷ್ಠೆಗೆ ಕಿಂಚಿತ್ತು ದಕ್ಕೆ ಆಗಲಿಲ್ಲ ಸಾಮಾನ್ಯವಾಗಿ ನಾಯಂಕರು ಸಾಮಾಜಿಕ ನೀತಿಯಲ್ಲಿ ಬಹಳ ಸಂಪ್ರದಾಯಶೀಲರಾಗಿದ್ದರಿಂದ ಅವರು ಬ್ರಾಹ್ಮಣರ ಪ್ರಭಾವಕ್ಕೆ ಒಳಗಾಗಿದ್ದರು ಆಂಧ್ರಪ್ರದೇಶದ ನಾಯಕರುಗಳು ಕೆಲವು ಬ್ರಾಹ್ಮಣರನ್ನು ರಾಜ್ಯಪಾಲರಾಗಿ ಲೆಕ್ಕಪರಿಶೋಧಕರಾಗಿ ನೇಮಿಸಿದ ಉದಾಹರಣೆಗಳಿವೆ ಮುಂತಾದ ಹುದ್ದೆಗಳನ್ನು ಬ್ರಹ್ಮಣರಿಗೆ ನೀಡಿದ್ದನ್ನು ಹಲವಾರು ಶಾಸನಗಳಲ್ಲಿ ನಮಗೆ ಮಾಹಿತಿ ತಿಳಿದು ಬರುತ್ತದೆ. ಉದಾ: ರಚಿರಾಜು, ತಿಮ್ಮರಾಜು, ಪೆದ್ದ ತಿರುಮಲಯ್ಯ, ದೇವರೂಸಯ್ಯ, ನಂದ್ಯಾಲ ಗೋಪಯ್ಯ ಮೊದಲಾದ ಬ್ರಾಹ್ಮಣ ವರ್ಗದವರು ಕೊಂಡವೀಡು ಪ್ರದೇಶ, ಗುತ್ತಿ ಸೀಮೆ ಪ್ರದೇಶ ಈ ಪ್ರದೇಶಗಳಿಗೆ ನಾಯಂಕರುಗಳಾಗಿ ವಿಜಯನಗರ ಅರಸರಿಂದ ನೇಮಕಗೊಂಡು ಕಾರ್ಯ ನಿರ್ವಹಿಸದರ ಬಗ್ಗೆ ತಿಳಿದು ಬರುತ್ತದೆ.

**ಕ್ಷತ್ರಿಯ ವರ್ಗ**

ವರ್ಣ ವ್ಯವಸ್ಥೆಯಲ್ಲಿ ಕ್ಷತ್ರಿಯರು ಧೈರ್ಯ, ಸಾಹಸ, ಶೌರ್ಯ, ತೇಜಸ್ಸು, ಮುಂತಾದ ಸ್ವಾಭಾವಿಕ ಗುಣಧರ್ಮವನ್ನು ಹೊಂದಿದ್ದರು. ಆಡಳಿತ ನಡೆಸಲು ಯುದ್ಧ ಮಾಡಲು ಇವರು ಸಮರ್ಥರಾಗಿದ್ದರು ವರ್ಣ ವ್ಯವಸ್ಥೆಯಲ್ಲಿ ಇವರು ಹೆಚ್ಚಿನ ಅಧಿಕಾರವನ್ನು ಪಡೆದು ರಾಜ್ಯದ ಆಡಳಿತವನ್ನು ನಿರ್ವಹಿಸಿದರು ಇವರನ್ನು ವೇದಗಳ ಕಾಲದಲ್ಲಿ ರಾಜನೆಂದು ಕರೆಯುತ್ತಿದ್ದರು ಆಂಧ್ರಪ್ರದೇಶದ ನಾಯಕ ಮನೆತನಗಳು ಆಳ್ವಿಕೆ ಮಾಡುವ ರಾಜರು ಕ್ಷತ್ರಿಯರಾಗಿದ್ದು ಧಾರ್ಮಿಕ ಆಚರಣೆಗಳಿಂದ ಬ್ರಾಹ್ಮಣನಿಗೆ ಮಾಡಿದ ದಾನ ಧರ್ಮಗಳಿಂದ ರಾಜನ ಸ್ಥಾನಮಾನ ಪಡೆದರು ಇವರು ತಮ್ಮನ್ನು ಕ್ಷತ್ರಿಯ ಸ್ಥಾನಮಾನಗಳು ಎಂದು ಹೇಳಿಕೊಂಡರು. ತಳ ಸಮುದಾಯಗಳಿಗೆ ಸೇರಿದವರಿಗೆ ಅರಸರಾಗುವ ಪ್ರಕ್ರಿಯೆಯಲ್ಲಿ ಸಂಸ್ಕೃತೀಕರಣ ಮತ್ತು ಕ್ಷೇತ್ರೀಕರಣ ಮಾಡಿಕೊಳ್ಳುವುದು ಭಾರತದ ಚರಿತ್ರೆಯಲ್ಲಿ ಸರ್ವೇಸಾಮಾನ್ಯವಾದ ಸಂಗತಿ ಆಗಿದೆ. ಆಂಧ್ರ ನಾಯಕರುಗಳು ಬೇರೆ ಬೇರೆ ಕೆಳ ಸಮುದಾಯಗಳಿಗೆ ಸೇರಿದವರಾಗಿದ್ದರು ರಾಜ್ಯಭಾರವನ್ನು ಆರಂಭಿಸಿದ ಕೂಡಲೇ ತಮ್ಮ ಮೂಲ ಜಾತಿ ಬದಲಾಗಿ ತಮ್ಮನ್ನು ಕ್ಷತ್ರಿಯರೆಂದು ಹೇಳಿಕೊಂಡಿದ್ದಾರೆ. ಕಮ್ಮ ವೆಲಮ, ರೆಡ್ಡಿ, ನಾಬಿ, ಬಲಿಜ ಮೊದಲಾದ ಜಾತಿಗಳಿಗೆ ಸೇರಿದ ನಾಯಕರುಗಳಿದ್ದರು. ಇವರು ರಾಜರಾದ ಮೇಲೆ ಪ್ರಭುತ್ವಕ್ಕೆ ಅಗತ್ಯವಾದ ಪ್ರಭುತ್ವದ ಪರಿಭಾಷೆಗಳನ್ನು ಧಾರಣೆ ಮಾಡಿಕೊಂಡರು.

**ವೈಶ್ಯರು**

ಮದ್ಯಕಾಲಿನ ಆಂಧ್ರಪ್ರದೇಶದ ನಾಯಕ ಮನೆತನಗಳಲ್ಲಿ ಮೂರನೇ ವರ್ಗವಾದ ವೈಶ್ಯರು, ಇವರ ಪ್ರಮುಖ ಹುದ್ದೆ ವ್ಯಾಪಾರ ಮಾಡುವುದು ಕೆಲವರು ವ್ಯಾಪಾರದೊಂದಿಗೆ ಕೃಷಿ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಆಂಧ್ರ ನಾಯಕರ ಪ್ರದೇಶಗಳಲ್ಲಿ ಹಲವಾರು ವರ್ತಕ ವರ್ಗಗಳು ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದರು ಬಗ್ಗೆ ಹಲವಾರು ದಾಖಲೆಗಳು ತಿಳಿಸುತ್ತದೆ. ಉದಾ : ಪೆಣುಗೊಂಡ ಪ್ರದೇಶದ ಗಂದಿಕೋಟ ಸೀಮಾ ಪ್ರಾಂತ್ಯದಲ್ಲಿ ವೀರಪ್ಪನ್ನ ಎಂಬ ವರ್ತಕ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದರು ಬಗ್ಗೆ ತಿಳಿದು ಬರುತ್ತದೆ ಹಾಗೆ ಗುತ್ತಿ ಸೀಮ ಪ್ರದೇಶಕ್ಕೆ ಸೇರಿದ ರಂಗಜಟ್ಟಗಾರು ಮೊದಲಾದ ವರ್ತಕರು ಸಹ ವರ್ತಕ ಶ್ರೇಣಿ ಕಾರ್ಯನಿರ್ವಹಿಸಿದರ ಬಗ್ಗೆ ತಿಳಿದು ಬರುತ್ತದೆ.

**ಶೂದ್ರರು**

ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರುರು ಕೊನೆಯರಾಗಿದ್ದಾರೆ. ಶೂದ್ರರಲ್ಲಿ ಹಲವಾರು ಉಪಜಾತಿಗಳಿವೆ ಅವರಿಗೆ ವಿದ್ಯಾಭ್ಯಾಸಕ್ಕೆ ಅರ್ಹತೆ ಇರಲಿಲ್ಲ ಸಂಸ್ಕೃತಿಯಿಂದ ಅವರನ್ನು ವಂಚಿಸಲಾಗಿತು. ಪ್ರತಿಯೊಂದು ಉಪಜಾತಿಯನ್ನು ತಮ್ಮದೇ ಆದ ಸದಸ್ಯರು ತಮ್ಮ ಪಂಗಡಗಳೊಂದಿಗೆ ವಿವಾಹ ಮಾಡಿಕೊಳ್ಳುತ್ತಿದ್ದರು. ಬಹುಸಂಖ್ಯಾತ ಶೂದ್ರರು ಗೇಣಿದಾರರು ಅಥವಾ ಕೃಷಿ ಕಾರ್ಮಿಕರಾಗಿದ್ದರು ರಾಜ್ಯಕ್ಕೆ ಬೆನ್ನೆಲುಬಾಗಿದ್ದರು. ಆರ್ ಎಸ್ ಶರ್ಮರವರು ಪಶುಗಳಿಗೆ ನಡೆದ ಹೋರಾಟದ ಮುಂದೆ ಭೂಮಿಯ ಒಡೆತನಕ್ಕೆ ನಡೆಯಿತು ಇದರಲ್ಲಿ ಅವರು ಸೋತರು ಅವರನ್ನೇ ಮುಂದೆ ನಾಲ್ಕನೇ ವರ್ಗ ಎಂದು ಪರಿಗಣಿಸಲಾಗಿತ್ತು.

ಆಂಧ್ರಪ್ರದೇಶದ ನಾಯಕ ಮನೆತನಗಳಲ್ಲಿ 53 ನಾಯಕರು ಬ್ರಾಹ್ಮಣ ಜಾತಿಗೆ ಸೇರಿದವರಾಗಿದ್ದರು 52 ಜನ ಕಮ್ಮಂ ಜಾತಿಗೆ ಸೇರಿದವರು ಹಾಗೂ ಐದು ಜನ ಮಾತ್ರ ವೇಲಮ ಸೇರಿದವರಾಗಿದ್ದರೆಂದು ತಿಳಿದುಬರುತ್ತದೆ ಇನ್ನುಳಿದ ಬಹುಪಾಲು ನಾಯಂಕರುಗಳು ಶೂದ್ರ ಸಮುದಾಯಕ್ಕೆ ಸೇರಿದವರಾಗಿದ್ದರು. ಉದಾ : ವಿಶ್ವಕರ್ಮರು, ಗೊಲ್ಲರು, ಈಡಿಗರು, ಕಂಬಾರರು, ಕಾಪುಗಳು, ನೇಕಾರರು ಮೇದಾರರು, ಚಿತ್ರಕಾರರು, ಉಪ್ಪಾರರು, ಬೆಸ್ತರು, ಬಲಿಜಗರು ಮುಂತಾದ ಜಾತಿಗಳು ಶೂದ್ರವರ್ಗಕ್ಕೆ ಸೇರಿದವರಾಗಿದ್ದಾರೆ.

**ಕುಟುಂಬದ ವ್ಯವಸ್ಥೆ**

ಕುಟುಂಬವು ಸಮಾಜದ ಮೂಲಭೂತ ಘಟಕವಾಗಿದೆ ಕೆಲವು ಇತಿಹಾಸಕಾರರು ಅಂದಿನ ಕುಟುಂಬವನ್ನು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿತ್ತು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮತ್ತು ಕೆಲವು ಇತಿಹಾಸಕಾರರು ಕುಟುಂಬವನ್ನು ಸಮಾಜದ ಕೇಂದ್ರ ಬಿಂದುವಾಗಿತ್ತೆಂದಿದ್ದಾರೆ. ವಿಜಯನಗರದ ಆಂಧ್ರಪ್ರದೇಶಗಳ ನಾಯಕ ಮನೆತನಗಳ ಆಳ್ವಿಕೆ ಕಾಲದಲ್ಲಿ ಸಂಸ್ಕೃತಿಯನ್ನು ಚರ್ಚಿಸುತ್ತಿರುವ ಈ ಸಮಯದಲ್ಲಿ ಕುಟುಂಬವು ಮೊದಲ ಘಟಕವಾಗಿ ಪರಿಗಣಿಸಲಾಗಿದೆ. ಸಾಮಾನ್ಯವಾಗಿ ಕುಟುಂಬವು ನಿರಂತರವಾಗಿ ಬದಲಾಗುತ್ತಿರುವ

ಒಂದು ರೀತಿಯ ಚಲನಾತ್ಮಕ ಸಂಸ್ಥೆಯಾಗಿದೆ ಅಂದಿನ ಆಂಧ್ರ ನಾಯಕರ ಸಮಾಜದಲ್ಲಿ ಕುಟುಂಬ ವ್ಯವಸ್ಥೆಯು ಪಿತೃ ಪ್ರಧಾನವಾಗಿತ್ತು ವಿಸ್ತೃತ ಕುಟುಂಬ ಮತ್ತು ಕೂಡುಕುಟುಂಬ ಹಾಗೂ ವಿಭಜಿತ ಕುಟುಂಬಗಳು ಅಸ್ತಿತ್ವದಲ್ಲಿದ್ದವು ಪಿತೃಪ್ರಧಾನ ಕುಟುಂಬದಲ್ಲಿ ಕುಟುಂಬದ ಮುಖ್ಯಸ್ಥನಾಗಿ ಮನೆಯ ಹಿರಿಯನು ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದನು ತಂದೆ ಕುಟುಂಬದ ಯಜಮಾನನಾಗಿ ಕುಟುಂಬದ ಎಲ್ಲಾ ಸದಸ್ಯರು ಪ್ರತಿ ವಿಷಯದಲ್ಲಿ ಅವನಿಗೆ ವಿಧೇಯರಾಗಿದ್ದರು. ಉದಾ : ಮೊಗ್ಗಲುಟ್ಟು ಗ್ರಾಮದಲ್ಲಿ ದೊರೆತ ಶಾಸನದ ಮಾಹಿತಿ ಪ್ರಕಾರ ಗಾನಾಂಬಿಕೆ ಎಂಬುವವಳು ತನ್ನ ತಂದೆ ತಿಮ್ಮರಾಜು ನಾಯಕನ ಅನುಮತಿಯ ಮೇರೆಗೆ ಮೊಗ್ಗಲುಟ್ಟು ಗ್ರಾಮವನ್ನು ಬ್ರಾಹ್ಮಣರಿಗೆ ನೀಡಿದಳೆಂದು ತಿಳಿಯುತ್ತದೆ. ಈ ಶಾಸನದಿಂದ ಸಮಾಜವು ಪಿತೃ ಪ್ರಧಾನವಾಗಿದ್ದು ಕುಟುಂಬದಲ್ಲಿ ತಂದೆಯ ಮಾತನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ.

**ಆಹಾರ ಪದ್ಧತಿಗಳು**

ಆಂಧ್ರ ಪ್ರದೇಶದ ನಾಯಕ ಮನೆತನಗಳ ಆಹಾರ ಪದ್ಧತಿಗಳನ್ನು ಕುರಿತು ಸಾಹಿತ್ಯ ಕೃತಿಗಳು, ಬಕೈರುಗಳು, ಇನ್ನು ಮುಂತಾದ ಆಕಾರಗಳಿಂದ ಮಾಹಿತಿ ದೊರೆಯುತ್ತದೆ. ಈ ಮನೆತನಗಳು ವಿಜಯನಗರ ಮತ್ತು ವಿಜಯನಗರೋತ್ತರದಲ್ಲಿ ಅಸ್ತಿತ್ವದಲ್ಲಿದ್ದುದರಿಂದಾಗಿ ಸಾಮಾನ್ಯವಾಗಿ ವಿಜಯನಗರ ಕಾಲದ ಆಹಾರ ಪದ್ಧತಿಯು ಈ ಮನೆತನಗಳಲ್ಲಿ ಮುಂದುವರೆದಿದೆ ಎನ್ನಬಹುದೇ.

ಆಂಧ್ರದ ನಾಯಕರು ಮೂಲತ: ಸಸ್ಯಹಾರಿ ಮತ್ತು ಮಾಂಸಹಾರಿ ಪ್ರಿಯರಾಗಿದ್ದರು ಮಾರ್ಕಂಡೇಯ ಪುರಾಣದ ಪ್ರಕಾರ ಆಂಧ್ರದ ನಾಯಕರು ಪ್ರಮುಖ ಆಹಾರ ಧಾನ್ಯಗಳಾಗಿ ಅಕ್ಕಿ, ಗೋಧಿ, ಬಾರ್ಲಿ, ರಾಗಿ, ಸಜ್ಜೆಲು, ಬಟಾಣಿ, ಸಾಸುವೆ ಪ್ರಮುಖ ಬೆಳೆಗಳನ್ನು ಬೆಳೆಯುತ್ತಿದ್ದರು ಮತ್ತು ಹಾಗೆ ಸಾಸಿವೆ, ಮೆಣಸು, ಜೇನು ಮುಂತಾದವುಗಳನ್ನು ಬಳಸುತ್ತಿದ್ದರು ಇವರಿಗೆ ಅರಿಶಿನ, ಈರುಳ್ಳಿ, ಶುಂಠಿ, ಜೀರಿಗೆ ಮೊದಲಾದವುಗಳನ್ನು ಬಳಸುತ್ತಿದ್ದರು.

ಬೀಜಗಳಿಂದ ತೈಲವನ್ನು ತೆಗೆಯುವ ಜ್ಞಾನವು ಜನರಿಗೆ ಗೊತ್ತಿತ್ತು ಆ ಕಾಲದ ಮುಖ್ಯ ಎಣ್ಣೆ ಬೀಜಗಳಲ್ಲಿ ಎಳ್ಳು ಮುಖಾಂತರ ತೈಲವನ್ನು ತೆಗೆದು ಅಡುಗೆ ಹಾಗೂ ಇನ್ನಿತರ ಕಾರ್ಯಗಳಿಗೆ ಬಳಸುತ್ತಿದ್ದರು ತರಕಾರಿಗಳು ಆಂಧ್ರಪ್ರದೇಶದ ನಾಯಕರಿಗೆ ವಿವಿಧ ಬಗೆಯ ತರಕಾರಿಗಳ ಪರಿಚಯವಿದ್ದು ಮೂಲಂಗಿ, ಬದನೆಕಾಯಿ, ಗುಮ್ಮಡಿ, ಅವಲು ಮುಂತಾದ ತರಕಾರಿಗಳ ಬಗ್ಗೆ ಮಾರ್ಕಂಡೇಯ ಪುರಾಣ ಹಾಗೂ ಬಸವ ಪುರಾಣಗಳಲ್ಲಿ ಉಲ್ಲೇಖವಿದೆ ಇವರು ತಾಜಾ ಹಸುವಿನ ತುಪ್ಪ ಮತ್ತು ಮೊಸರು ಗಳನ್ನು ತಯಾರಿಸುತ್ತಿದ್ದರು ಮಾರ್ಕಂಡಯ್ಯ ಪುರಾಣವು ಮಾಂಸಹಾರ ಆಹಾರವನ್ನು ತಯಾರಿಸುತ್ತಿದ್ದರ ಬಗ್ಗೆ ಉಲ್ಲೇಖಿಸುತ್ತದೆ.

ಮೀನುಗಳನ್ನು ಸಹ ಆಹಾರವಾಗಿ ಬಳಸುತ್ತಿದ್ದರು ಹಾಗೂ ವಿವಿಧ ಬಗೆಯ ಹಣ್ಣುಗಳಾಗಿ ಮಾಮಿಡಿ, ದಾನಿಮ, ನೆರಡು, ನಾರಿಂಜ, ಗಜನಿಮ್ಮೆ ದ್ರಾಕ್ಷಂ, ಮದಿಪಲಂ, ಖರ್ಜೂರಂ, ಮುಂತಾದವುಗಳನ್ನು ಆಹಾರವಾಗಿ ಬಳಸುತ್ತಿದ್ದರೆಂದು ತಿಳಿದು ಬರುತ್ತದೆ.

**ಪಾನೀಯಗಳು**

ಆಂಧ್ರ ನಾಯಕರುಗಳು ಆರೋಗ್ಯಕ್ಕಾಗಿ ವಿವಿಧ ರೀತಿಯ ಪಾನೀಯಗಳನ್ನು ಬಳಸುತ್ತಿದ್ದರು ಕಬ್ಬಿನಿಂದ ತಯಾರಿಸಿದ ಪಾನೀಯಾ, ಸೇಂದಿ, ಮರದಿಂದ ತೆಗೆದ ಜೀಠಿಕ ಎಂದು ಕರೆಯಲ್ಪಡುವ ಪಾನೀಯವನ್ನು ಮಹಿಳೆಯರು ಸಹ ಸೇವಿಸುತ್ತಿದ್ದರೆಂದು ಆಂಧ್ರದ ಸಾಹಿತ್ಯ ಕೃತಿಯಾದ ಕುಮಾರಸಂಭವ ಕೃತಿಯಲ್ಲಿ ನೋಡಬಹುದು.

**ಹಬ್ಬಗಳು**

ನಾಯಕರುಗಳು ಇಂದಿನ ಸಂಪ್ರದಾಯಗಳಂತೆ ಹಬ್ಬ ಹರಿದಿನಗಳನ್ನು ಮುಂದುವರಿಸಿಕೊಂಡು ಬಂದರು ಶಿವರಾತ್ರಿ ಮಹಾತ್ಮೆ ಎಂಬ ಸಾಹಿತ್ಯ ಕೃತಿಯು ಅಂದಿನ ಕಾಲದಲ್ಲಿ ಜನರು ಆಚರಿಸುತ್ತಿದ್ದ ಹಬ್ಬಗಳನ್ನು ಹರಿದಿನಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ ಪ್ರಮುಖ ಹಬ್ಬಗಳೆಂದರೆ ಯುಗಾದಿ, ಪ್ರತಿವರ್ಷ ಚೈತ್ರ ಶುದ್ಧ ಪಾಡ್ಯಮಿ ದಿನ ಈ ಹಬ್ಬವನ್ನು ಆಚರಿಸುತ್ತಾರೆ ಇದು ಮೊದಲ ಹಬ್ಬವಾಗಿದೆ.

**ದವನ ಪುನ್ನಮಿ :**

ಚೈತ್ರ ಮಾಸದ ಹುಣ್ಣಿಮೆಯ ರಾತ್ರಿ ದಿನ ತೆಲುಗುರಾಯದೇವರ ವಾರ್ಷಿಕ ಹಬ್ಬವಾಗಿ ಆಚರಿಸುತ್ತಾರೆ. ಈ ಹಬ್ಬವನ್ನು ಡೋಲೋತ್ಸವ ಎಂದು ಸಹ ಕರೆಯುತ್ತಾರೆ. ಈ ಹಬ್ಬವನ್ನು ಶ್ರೀ ಕಾಕುಲಂನಲ್ಲಿ ವಸಂತೋತ್ಸವವದ ಕೊನೆಯಲ್ಲಿ ಬರುವ ಹುಣ್ಣಿಮೆಯ ದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ. ನಿರ್ದಿಷ್ಟವಾಗಿ ವೈಶ್ಯರಲ್ಲಿ ಅವರು ಗುರುಗಳಿಗೆ ಉಡುಗೊರೆಯಾಗಿ ನೀಡುವ ಮೂಲಕ ಈ ಹಬ್ಬವನ್ನು ಆಚರಿಸುತ್ತಾರೆ.

**ಇರುವಕ ಪುನ್ನಮಿ**

ಜೇಷ್ಠ ಮಾಸದ ಹುಣ್ಣಿಮೆಯ ದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ನೇಗಿಲಿಗೆ ಪೂಜೆ ಮಾಡಿ ಮಳೆಗಾಲದ ಪ್ರಾರಂಭದಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ ಎತ್ತುಗಳನ್ನು ಚೆನ್ನಾಗಿ ತೊಳೆದು ಅವುಗಳಿಗೆ ಬಣ್ಣಬಳಿದ ಬಟ್ಟೆಗಳಿಂದ ಅಲಂಕರಿಸಿ ಪೊಂಗಲ್‌ನನ್ನು ಮಾಡಿ ಮಂಗಳವಾದ್ಯದ ಸಮೇತ ಪ್ರಾಣಿಗಳನ್ನು ಗ್ರಾಮದಿಂದ ಹೊರಗೆ ಕೊಂಡೊಯ್ಯಲಾಗುತ್ತದೆ. ಈ ಒಂದು ಹಬ್ಬವು ಆಂಧ್ರ ನಾಯಕರಲ್ಲಿ ಕಂಡುಬರುವ ಒಂದು ವಿಶಿಷ್ಟವಾದ ಹಬ್ಬ. ಇದು ಕಾಕತೀಯ ದೊರೆಗಳ ಕಾಲದಲ್ಲಿ ಆರಂಭವಾದ ಹಬ್ಬವಾಗಿದೆ.

**ಶ್ರಾವಣ ಪುನ್ನಮಿ**

ಇದು ಒಂದು ಹುಣ್ಣಿಮೆ ಹಬ್ಬ ಇದು ನೂಲಿ ಪೂನ್ನಿಮೆ ಎಂದು ಕರೆಯುತ್ತಾರೆ ಹುಣ್ಣಿಮೆ ದಿನ ಸಮಯದಲ್ಲಿ ಹೊಸ ಬಟ್ಟೆಗಳನ್ನು ತೊಟ್ಟು ದೇವರ ನಾಮಗಳ ಹಾಡಿ ಆಚರಿಸುವ ಹಬ್ಬವಾಗಿತ್ತು. ಹಾಗೂ ಇದು ಅವರ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಸಾಕ್ಷಿಯಾಗಿತ್ತು. ಇದಲ್ಲದೆ ವಿನಾಯಕ ಚೌತಿ, ದೇವಿನವರಾತ್ರಿ ಅಥವಾ ದಸರಾ, ದೀಪಾವಳಿ, ನಾಗಲಚೌತಿ, ಕೌಮುದಿ ಉತ್ಸವಂ, ಸಂಕ್ರಾಂತಿ(ಗೊಬ್ಬಿಲು ಪಂಡಗಾ), ರಥ ಸಪ್ತಮಿ,

ಶಿವರಾತ್ರಿ, ವಸಂತೋತ್ಸವ ಮುಂತಾದ ಹಬ್ಬಗಳನ್ನು ಆಚರಿಸುತ್ತಿದ್ದರು. ಒಟ್ಟಾರೆಯಾಗಿ ವಿಜಯನಗರ ಕಾಲದ ಆಂಧ್ರ ನಾಯಕರ ಸಮಾಜ ಮತ್ತು ಸಂಸ್ಕೃತಿ ವಿಶಿಷ್ಟವಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು.

**ಆಕರ ಗ್ರಂಥಗಳು**


- ಗುರುಮೂರ್ತಿ. ಎ (1990). *ಟೆಂಪಲ್ಸ್ ಆಫ್ ಕಡಪ ಡಿಸ್ಟ್ರಿಕ್.*
- ಹಸೀನಾಬೆಗಂ, (1989) *ದಿ ರೈಸ್ ಅಂಡ್ ಫಾಲ್ ಆಫ್ ಕಡಪ ಎ ಸ್ಟಡಿ.*
- ಹೆರಾಸ್. ಹೆಚ್ (1936) *ವಿಜಯನಗರ ಎಂಪೈರ್ – ಎ ಸಿಂಥಿಸೀಸ್ ಆಫ್ ಸೌತ್ ಇಂಡಿಯಾ ಕಲ್ಚರ್ ವಿಜಯನಗರ.* ಸೆಕ್ಸೆನಂಟರಿ ವಾಲ್ಯೂಮ್.
- ಖರಾಸಿಮ ನೊಬರು. (2002). *ಎ ಕಾನ್‌ಕಾರ್ಡೆನ್ಸ್ ಆಫ್ ದಿ ವಿಜಯನಗರ ಇನ್ಸ್‌ಕ್ರಿಫ್‌ಸನ್ಸ್ ಇನ್ ಸೌತ್ ಇಂಡಿಯಾ*
- ನಾಯಕವಾಡಿ, ವೈ.ಹೆಚ್ (1997). *ನಾಯಕ ಸಿಸ್ಟಂ ಅಂಡರ್ ವಿಜಯನಗರ ಎಂಪೈರ್.*
- ನಾಯ್ಡು, ಪಿ.ಎಸ್.ಆರ್. *ಆಂಧ್ರ ನಾಯಕಾಸ್ : ಎ ಸ್ಟಡಿ ಆಫ್ ದೇರ್ ಹಿಸ್ಟರಿ ಅಂಡ್ ಕಲ್ಚರ್*
- ನೀಲಕಂಠಶಾಸ್ತ್ರಿ, ಕೆ.ಎ, *ಎ ಸ್ಟಡಿ ಆಫ್ ಸೌತ್ ಇಂಡಿಯಾ ಫ್ರಮ್ ಇಸ್ಟಾರಿಕ್ ಟೈಮ್ ಟು ದಿ ಫಾಲ್ ಆಫ್ ವಿಜಯನಗರ ಎಂಪೈರ್.*
- ಸರೋಜಿನಿದೇವಿ. ಕೆ. (1984) ದ ಟೆಂಪಲ್ ಇನ್ ವಿಜಯನಗರ: ಎ ಸೋಷಿಯೋ ಎಕಾನಾಮಿಕ್ ಸ್ಟಡಿ.
- ವೆಂಕಟರಮಣಯ್ಯ, ಎನ್. (1935). *ಸ್ಟಡೀಸ್ ಇನ್ ದಿ ಇಸ್ಟರಿ ಆಫ್ ದಿ ಥರ್ಡ್ ಡೈನಸ್ಟಿ ಆಫ್ ವಿಜಯನಗರ.*